ಭದ್ರಾ ನಾಲೆಯು ಒಡೆದಿರುವುದನ್ನು ರಿಪೇರಿ ಮಾಡುವ ವಿಚಾರ

475 (753): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ಬಿ.ಆರ್. ಪ್ರಾಜೆಕ್ಟ್‌ನಲ್ಲಿರುವ ಭದ್ರಾ ಡ್ಯಾಂನ ಭದ್ರಾ ನಾಲೆ ಒಡೆದಿರುವುದನ್ನು ಯಾವಾಗ ದುರಸ್ತಿ ಮಾಡಲಾಗುವುದು;

ಆ) ಇದು ತಡವಾಗಲು ಕಾರಣವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಖಾಯಂ ದುರಸ್ತಿ ಕಾಮಗಾರಿಯನ್ನು ಇನ್ನು 2–3 ವರ್ಷಗಳ ಅವಧಿಯಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಆ) ಒಡೆದು ಹೋಗಿರುವ ಕಲ್ಲು ಗಾರೆ ಗೋಡೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಅದರ ತಳಪಾಯ ಭೂಗರ್ಭ ರಚನೆಯನ್ನು ತೀವ್ರವಾಗಿ ಪರಿವೀಕ್ಷಿಸಿ ನಂತರ ಖಾಯಂ ದುರಸ್ತಿಯ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ. ಸ್ಥಳದ ಅಭಾವ ಹಾಗೂ ಒಡೆದು ಹೋಗಿರುವ ಕಲ್ಲುಗಾರೆ ಗೋಡೆಯ ಭಾರಿ ಪ್ರಮಾಣದ ಕಲ್ಲುಗಳನ್ನು ಮೇಲಕ್ಕೆ ಎತ್ತಿ ದೂರ ಸಾಗಿಸುವ ಉಪಕರಣಗಳ ಅಭಾವದಿಂದಾಗಿ ಈ ಕಾಮಗಾರಿಯನ್ನು ಪ್ರಾರಂಭಿಸಲು ತಡವಾಗಿದೆ.

ಭದ್ರ ಮೇಲ್ದಂಡೆ ಯೋಜನೆಯ ಬಗ್ಗೆ

478 (838): ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಮೇಲ್ದಂಡೆ ಯೋಜನೆಯು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರುವುದೇ;

ಆ) ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತವಾಗಲು ಇರುವ ನ್ಯೂನತೆಗಳಾವುವು;

ಇ) ಯೋಜನೆಯನ್ನು ಕೈಗೊಳ್ಳುವುದು ಯಾವಾಗ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಭದ್ರಾ ಮೇಲ್ದಂಡೆ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದ್ದು, ಈ ಕೆಳಕಂಡ ವಿಚಾರಗಳ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಸಾಧ್ಯತೆ ಅಥವಾ ಅಸಾಧ್ಯತೆ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ:

1. ಕೃಷ್ಣಾ ಕೊಳ್ಳದ ಸಮಗ್ರ ಯೋಜನೆ ಅಡಿ ಭದ್ರಾ ಮೇಲ್ದಂಡೆ ಯೋಜನೆಗೆ ಕೇವಲ 8 ಟಿಎಂಸಿ ನೀರು ಲಭ್ಯವಿದೆ.

2. ಈ ಯೋಜನೆಯಿಂದ ಅರಣ್ಯ ಪ್ರದೇಶ ಹಾಗೂ ಕಾಫಿ ತೋಟಗಳನ್ನೊಳಗೊಂಡಂತೆ ಆಗುವ ಮುಳುಗಡೆ ಹಾಗೂ ಪರಿಸರದ ಹಿನ್ನೆಲೆ.

3. ಈ ಯೋಜನೆಯ ನಾಲೆಯ ಮೊದಲನೆ 50 ಮೈಲಿಗೆ ನೀರಾವರಿ ಸಾಧ್ಯತೆ ಇಲ್ಲದೇ ಇರುವುದು.

4. ಸದರಿ ಯೋಜನೆಯಿಂದ ಮೆ: ಕುದುರೆಮುಖ ಕಬ್ಬಿಣ ಅದುರು ಸಂಸ್ಥೆಯ ಹಲವು ರಚನೆಗಳು ಮುಳುಗಡೆ.

ಹಾಸನ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆ

482 (955): ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ, ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ಬಿಡುಗಡೆಯಾದ ಹಣವೆಷ್ಟು;

ಆ) ಪ್ರತಿ ತಾಲ್ಲೂಕಿನಲ್ಲಿ ಡಾಮರು ಹಾಕಿದ ರಸ್ತೆಗಳ ಉದ್ದವೆಷ್ಟು; ಹಾಗೂ ಜಲ್ಲಿ ಕಲ್ಲು ಹಾಕಿದ ರಸ್ತೆಗಳ ಉದ್ದವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ವಿವರಗಳು ಕೆಳಕಂಡಂತಿದೆ:–

ತಾಲ್ಲೂಕಿನ ಹೆಸರು	ರಸ್ತೆಗಳ ಅಭಿವೃದ್ಧಿಗಾಗಿ ಬಿಡುಗಡೆಯಾದ ಹಣ (ಲಕ್ಷ ರೂ.ಗಳಲ್ಲಿ)		
	1990-91	1991-92	1992-93
ಹಾಸನ	24.769	45.63	32.474
ಬೇಲೂರು	20.314	28.142	28.818
ಚನ್ನರಾಯಪಟ್ಟಣ	33.746	34.094	53.413
ಅರಸಿಕೆರೆ	31.89	49.564	46.134
ಹೊಳೆನರಸೀಪುರ	29.933	31.442	46.093
ಅರಕಲಗೂಡು	16.964	17.216	23.645
ಸಕಲೇಶಪುರ	25.133	24.600	37.833
ಆಲೂರು	4.842	4.869	7.906
ಒಟ್ಟು	187.591	235.557	276.316

ಆ) ವಿವರಗಳು ಕೆಳಕಂಡಂತಿವೆ

ತಾಲ್ಲೂಕಿನ ಹೆಸರು	ಡಾಂಬರು ಹಾಕಿರುವ ಉದ್ದ (ಕಿ.ಮೀ.ಗಳಲ್ಲಿ)	ಜಲ್ಲಿ ಹಾಕಿರುವ ಉದ್ದ (ಕಿ.ಮೀ.ಗಳಲ್ಲಿ)
ಹಾಸನ	165.90	101.20
ಬೇಲೂರು	170.80	69.80
ಚನ್ನರಾಯಪಟ್ಟಣ	248.30	163.50